ಕೆಲಸಾ ಮಾಡ್ರಿ' ಎಂದು ಮೇಲೆದ್ದ ರಾಮಪ್ಪ. 'ಆತ್ ಹಂಗಾರ್ ನಾ ಬರ್ತನಿ' ಎಂದು ನಿಂಗಪ್ಪನೂ ಎದ್ದ.

ಪುಟ್ಟ ಹುಡುಗಿ ಸಣವ್ವ ಇವರಿಬ್ಬರೂ ಎದ್ದದ್ದನ್ನು ಗಮನಿಸಿ, ಚಾಪೆ ಮೇಲಿದ್ದ ಅಂಜನದ ಎಲೆ ಹಿಡಿದು ತನಗೇನಾದರೂ ಕಾಣುತ್ತದೇನೆಂದು, ಅವರ ಚಿಕ್ಕಪ್ಪನಂತೆ ಎಡಗೈಲಿ ಎಲೆ ಹಿಡಿದು ನೋಡಿದಳು. ನಿಂಗಪ್ಪ ಹೊರಡಲನುವಾದ. 'ಕಾಕಾ ಇದ್ರಾಗ ಏನೂ ಕಾಣವಲ್ಲದಲ್ಲಾ' ಅಂತ ರಾಮಪ್ಪನನ್ನ ಕೇಳಿದಳು. ಒಂದು ಕ್ಷಣಕ್ಕೆ ಅವಕ್ಕಾಗಿ ರಾಮಪ್ಪ 'ಹೇ ಹುಚ್ಚಿ ಹಂಗ್ ಎಲ್ಲರಿಗೂ ಬರಲ್ಲ ತಗಿ ಈ ವಿದ್ಯೆ, ನಿನಗೇನ್ ಗೊತ್ತಾಕೇತಿ ಅದ್ರಾಗ ತಾ ಇಲ್ಲೆ' ಎಂದು ಎಲೆ ಕಸಿದು ಕೊಂಡು, 'ನೀವ್ ಹೋಗಿರ್ರಿ ನಾ ಎಲ್ಲಾ ಬರಬ್ಬರಿ ಮಾಡತನಿ' ಎಂದು ನಿಂಗಪ್ಪನನ್ನ ಬಾಗಿಲ ಬಳಿವರೆಗೂ ಬಂದು ಬೀಳ್ಕೊಟ್ಟ. ನಿಂಗಪ್ಪನಿಗೆ ಸಂಶಯವಾದರೂ ನಮಸ್ಕರಿಸಿ ಹೊರಟುಹೋದ. ತನ್ನ ಜೊತೆಗೆ ನಿಂಗಪ್ಪನನ್ನ ಬೀಳ್ಕೊಡಲು ಬಂದ ಸಣವ್ವಳ ತಲೆಗೊಂದು ಬಾರಿಸಿ 'ಸುಮ್ಮನಿರಾಕಾಗದಿಲ್ಲಾ ನಿನಗೆ ನಡೆ ಹೋಗ ಅತ್ತಾಗ ಆಡಾಕ್' ಎಂದು ಮನೆಯೊಳಕ್ಕೆ ಹೋದ.

ನಿಂಗಪ್ಪ ಊರಿಗೆ ಬಸ್ ಕಾಯುತ್ತಾ ಕುಳಿತ. ಬೀರಪ್ಪ ಸೀನು ಸುರೇಶಿ ದನಾ ಹುಡುಕುತ್ತಾ ಹೋದವರಿಂದೇನಾದರೂ ಸುದ್ದಿ ತಿಳಿಯ ಬಹುದೆಂದು, ಬೀರಪ್ಪನಿಗೆ ಫೋನ್ ಮಾಡಿ ತನ್ನ ವಿಷಯ ತಿಳಿಸಿದ ಹಾಗೂ 'ನಿಮಗೇನರ ಸುಳಿವು ಹತ್ತಿತಾ' ಎಂದು ವಿಚಾರಿಸಿದ. ಆ ಕಡೆಯಿಂದ 'ಇಲ್ಲಿ ಯಾರ್ ಕೇಳಿದ್ರೂ ಹಂಗೇನ್ ನೋಡಿಲ್ಲ, ಗೊತ್ತಿಲ್ಲ ಅಂತಾರ' ಎಂದ ಬೀರಪ್ಪ. 'ಸರಿ ಹಂಗಾರ ನಾನು ಊರಿಗೆ ಹೊಂಟನಿ. ನೀವು ಇನ್ನು ಸ್ವಲ್ಪತ್ತು ಆಕಡೆ ಈಕಡೆ ವಿಚಾರಿಸಿರ್ರಿ' ಎಂದು ಹೇಳಿ ಫೋನಿಟ್ಟ. ಬಸ್ ಬರುವ ಸೂಚನೆಯಿಲ್ಲದೆ, ಅಲ್ಲೇ ನಿಂತಿದ್ದ ಆಟೋ ಹತ್ತಿಕೊಂಡು ಊರು ತಲುಪಿದ ನಿಂಗಪ್ಪ.

ಬೀರಪ್ಪ, ಸೀನು ಸುರೇಶಿ ಟಿವಿಎಸ್ ಗಾಡಿ ಹತ್ತಿ ತಿರುಗಿದ್ದೇ ತಿರುಗಿದ್ದು. ಯಾವ ಸುಳಿವೂ ಪತ್ತೆ ಹತ್ತಲಿಲ್ಲ. ಹೀಗೆ ಹುಡುಕಾಡುತ್ತಲೆ ರಾತ್ರಿ ಹತ್ತನ್ನೊಂದು ಗಂಟೆಯಾಗಿತ್ತು. ರಾತ್ರಿ ಗಸ್ತು ತಿರುಗುವ ಪೊಲೀಸ್ ಪೇದೆ ಇವರನ್ನ ಸ್ಟೇಷನ್‌ಗೆ ಕರೆದೊಯ್ದು ವಿಚಾರಿಸಿದರು. 'ಹಿಂಗಾ ದನನಾ ಹುಡುಕ್ಯಾಡಕೆಂತ್ ಬಂದಿದ್ದವಿರಿ ಸರ್' ಎಂದು ಬೀರಪ್ಪ ಉತ್ತರಿಸಿದ. 'ಹಿಂಗ್ ಇಷ್ಟೊತ್ನಾಗ ಯಾವನರ ದನಾ ಹುಡುಕುತಾನೇನ್ರಲೆ? ಖರೆ ಹೇಳ್ರಿ' ಎಂದು ಪೇದೆ ದಬಾಯಿಸಿದ. ಸುರೇಶಿಗೆ ಪೇದೆ 'ಹೋಗು ಎಲ್ಲೆರ ಸೊಳ್ಳೆಬತ್ತಿ ತಗಂಡ್ ಬಾ' ಎಂದು ಕಳಿಸಿದ. ಹೆಚ್ಚುಕಡಿಮೆ ಮಾತಾಡುವ ಸಮಯ ಅಲ್ಲವೆಂದು ಸುಮ್ಮನೆ ಅಂಗಡಿ ಹುಡುಕುತ್ತಾ ಸುರೇಶಿ ಹೊರಟ. ಬೀರಪ್ಪ ಹಾಗೂ ಸೀನು ಸುರೇಶಿ ಬರುವವರೆಗೆ ಸ್ಟೇಷನ್‌ನಲ್ಲಿ ಇರುವುದಾಗಿ ತಿಳಿಸಿದರು. ಸುರೇಶಿ ಇಷ್ಟೊತ್ತಲ್ಲಿ ಯಾವ ಅಂಗಡಿ ಬಾಗಿಲು ತೆರೆದಿರುತ್ತದೆಂದು ಹುಡುಕುತ್ತಾ ಹೊರಟ. ಸ್ವಲ್ಪ ದೂರದ ಹುಡುಕಾಟದ ನಂತರ ಅಂಗಡಿಯೊಂದರ ಸ್ಟಾಟ್ರಸ್ ಕದ ಮುಚ್ಚುವಂತೆ ಕಂಡಿತು. ಓಡಿ ಹೋಗಿ ಸೊಳ್ಳೆಬತ್ತಿ ಬೇಕೆಂದು ಸುರೇಶಿ ಕೇಳಿದ. ಎರಡು ರೂಪಾಯಿ ಚಿಲ್ಲರೆ ಇದ್ದರೆ ಮಾತ್ರ ಕೊಡು ಇಲ್ಲಂದ್ರ ಇಲ್ಲ ಎಂದ ವ್ಯಾಪಾರಿ. ಇಲ್ಲ ನನ್ನ ಹತ್ರ ಇರೋದು ಹತ್ತು ರೂಪಾಯಿ ಮಾತ್ರ. ಇದ್ನ ಇಟಗಂಡು ಒಂದೆರಡು ಕೊಡು ಎಂದಿದ್ದಕ್ಕೆ ಅಂಗಡಿಯವನು ಮುಖ ಗಂಟಿಕ್ಕಿ ಕೊಂಡು ಸೊಳ್ಳೆಬತ್ತಿ ಕೊಟ್ಟ. ಹೀಗೆ ಸೊಳ್ಳೆಬತ್ತಿ ಕೊಂಡು ಬರುತ್ತಿರಲು, ಟಾಟಾ ಎಸಿ ಗಾಡಿಯೊಂದು ಆಕಳೊಂದನ್ನು ಹೇರಿಕೊಂಡು ವೇಗವಾಗಿ ಹೋಗಿತು. ಈ ದೃಶ್ಯವನ್ನು ಸುರೇಶಿ ಹಿಂದೆ ಬರುತ್ತಿದ್ದ ಗಾಡಿಯ ಬೆಳಕಿನಲ್ಲಿ ಕಂಡಕೂಡಲೇ ಕೂಗುತ್ತಾ ಓಡತೊಡಗಿದ. ಸುರೇಶಿಯ ಓಟಕ್ಕಿಂತ ಗಾಡಿಯ ವೇಗ ಅತಿಯಾಗಿ ಕೈತಪ್ಪಿ ಹೋಯಿತು. ಸ್ಟೇಷನ್‌ಗೆ ದೌಡಾಯಿಸಿ ಬಂದು ಬೀರಪ್ಪ ಹಾಗೂ ಸೀನುಗೆ ವಿಷಯ ಮುಟ್ಟಿಸುತ್ತಿರಲು, ಪೇದೆ ಸೊಳ್ಳೆಬತ್ತಿ ತಂದಿಯಾ ಎಂದ. ಓಟದ ರಭಸಕ್ಕೆ ಸೊಳ್ಳೇಬತ್ತಿ ಅಂಗೈಯಲ್ಲಿ ಪುಡಿಯಾಗಿ ಹೋಗಿತ್ತು. ಅದನ್ನೇ ತೋರಿಸಲು ಪೇದೆ ಕೆಕ್ಕರುಗಣ್ಣಿನಿಂದ ನೋಡಿದ. ನಂತರ ಅಲ್ಲಿದ್ದ ಪೇದೆಗೆ ನೂರು ರೂಪಾಯಿ ಜೇಬಿನೊಳಕ್ಕಿಟ್ಟು, ಟಿವಿಎಸ್ ಗಾಡಿ ಹತ್ತಿ ಮೂವರೂ ಯಾವ ಕಡೆ ಹೋಗಿತೆಂದು ಹಿಂಬಾಲಿಸಲು ಪ್ರಯತ್ನಿಸಿದರು. ಆದರೆ, ಯಾವ ಗಾಡಿಯ ಸುಳಿವೂ ಹತ್ತಲಿಲ್ಲ. ಕೊನೆಗೆ ಸುಸ್ತಾಗಿ ಮನೆಯ ಕಡೆಗೆ ಹಾದಿ ಹಿಡಿದರು.

ಮಾರನೇ ದಿನ ಬೆಳಿಗ್ಗೆಯೇ ನಿಂಗಪ್ಪ